(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ನೀಡಲಾಯಿತು)

2. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ವಿಧೇಯಕ–2013

ಪರ್ಯಾಲೋಚನಾ ಪ್ರಸ್ತಾವ

ಶ್ರೀಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2013ನೇ ಸಾಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಯಿತು. ಮಾನ್ಯ ಸಚಿವರು Explainಮಾಡಿ.

ಶ್ರೀ ಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ Vice Chancellor ಅನ್ನು ನೇಮಕ ಮಾಡಬೇಕಾದರೆ ಸರ್ಕಾರದ ಸಹಮತಿ ಇಲ್ಲ ಕೇಳಬೇಕಾದ ಅವಶ್ಯಕತೆಯೂ ಇಲ್ಲ. ಈಗ ಸರ್ಕಾರದ ಸಹಮತಿಯೊಂದಿಗೆ ಉಳಿದ ವಿಶ್ವವಿದ್ಯಾಲಯಗಳಲ್ಲಿ Vice Chancellorಗಳ ನೇಮಕವಾಗುತ್ತದೆ ಆ ರೀತಿ ಸರ್ಕಾರದ ಸಹಮತಿಯೊಂದಿಗೆ ನೇಮಕ ಮಾಡಬೇಕು. ಇದನ್ನು ಸೆಕ್ಷನ್ 13(2)ರಲ್ಲಿ ಹೇಳಿದ್ದೇವೆ. ಸೆಕ್ಷನ್–13(3)ರಲ್ಲಿ ಉಳಿದ ವಿಶ್ವವಿದ್ಯಾಲಯಗಳಿಗೆ ಏನು ಹೇಳಿದೆ ಅದೇ ರೀತಿ Search Committee ಅರ್ಜಿಯನ್ನು ಆಹ್ವಾನಿಸಿ ಮೆರಿಟ್ ಲಿಸ್ಟ್ ಮಾಡಿ ಅದರ ಮೇಲೆ ಹೆಸರನ್ನು ಪ್ರಪೋಸಲ್ ಮಾಡತಕ್ಕಂಥದ್ದು. ಸೆಕ್ಷನ್–13(4)ರಲ್ಲಿ ಕುಲಪತಿಗಳ ಸೇವಾ ಅವಧಿ ಮೂರು ವರ್ಷ ಇದೆ ಉಳಿದ ವಿಶ್ವವಿದ್ಯಾನಿಲಯಗಳ ನಿಟ್ಟಿನಲ್ಲಿ 4 ವರ್ಷ, ಮುಂಚೆ ಹೇಗಿತ್ತು ಎಂದರೆ ಮೂರು ವರ್ಷ ಇತ್ತು. ಒಂದು ವರ್ಷ ಗೌರ್ನರ್‌ಗೆ ವಿಸ್ತರಿಸುವ ಅಧಿಕಾರ ಇತ್ತು. ಈಗ ವಿಸ್ತರಿಸುವ ಅಧಿಕಾರ ಇಲ್ಲ. ನೇಮಕ ಅವಧಿ 4 ವರ್ಷ ಎಂದು ಮಾಡಿದೆ. ಸೆಕ್ಷನ್–15 ರಲ್ಲಿ ರಿಜಿಸ್ಟ್ರಾರ್‌ನ್ನು ಆಡಳಿತ ಮಂಡಳಿಯ ಶಿಫಾರಸ್ಸಿನ ಮೇರೆಗೆ ಕುಲಪತಿಗಳನ್ನು ನೇಮಕ ಮಾಡುವುದನ್ನು ತೆಗೆದು ಹಾಕಿ ಇತರೆ ವಿಶ್ವವಿದ್ಯಾಲಯಳಿಗೆ ಇರುವಂತೆ ಸರ್ಕಾರ ರಿಜಿಸ್ಟ್ರಾರ್‌ಗಳನ್ನು ನೇಮಕ ಮಾಡಬೇಕು. ರಿಜಿಸ್ಟ್ರಾರ್‌ಗಳನ್ನು ನೇಮಕ ಮಾಡಬೇಕಾದರೆ ಮುಂಚೆ ಹೇಳಿದ ರೀತಿಯಲ್ಲಿ Registrar Administration ಅದರೆ IAS, IPS, KAS

ಇವರಿಗೆ ಆದ್ಯತೆಯನ್ನು ಕೊಡಬೇಕು. Registrar (Evaluation) ಆದರೆ ಆ University ವ್ಯಾಪ್ತಿಯೊಳಗೆ ಬರತಕ್ಕಂಥ ಸರ್ಕಾರ ಅಥವಾ ಅನುದಾನಿತ ಶಿಕ್ಷಣ ಸಂಸ್ಥೆಗಳು. ಏಕೆಂದರೆ ಖಾಸಗಿ ಶಿಕ್ಷಣ ಸಂಸ್ಥೆಯವರು ಸರ್ಕಾರಿ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್‌ಗಳು ಆಗಿ ಬಿಟ್ಟಿದ್ದಾರೆ. ಆದರೆ ಅದು ಆ ರೀತಿ ಇಲ್ಲ. Governor ಅದನ್ನು accept ಮಾಡಿ ಬಿಟ್ಟಿದ್ದಾರೆ. ಪ್ರಶ್ನೆ ಮಾಡುವ ಅಧಿಕಾರವು ಸರ್ಕಾರಕ್ಕೆ ಇಲ್ಲದಂತಾಗಿ ಬಿಟ್ಟಿದೆ. ಅದು ಹಾಗೆ ಆಗಬಾರದು.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ನೀವು ಹಿಂದೆ ಈ ರೀತಿ ತಂದಾಗ ಅದನ್ನು ನಾವು reject ಮಾಡಿಸಿರುತ್ತೇವೆ.

ಶ್ರೀ ಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಹೌದು. ಖಾಸಗಿ ಅನುದಾನಿತ ಕಾಲೇಜುಗಳವರು ಆಗಬಹುದು. ಖಾಸಗಿ ಕಾಲೇಜಿನವರು ಆಗಬಾರದು. ಲಕ್ಷಾಂತರ ಮಕ್ಕಳ ಭವಿಷ್ಯ, ಸಾವಿರಾರು ಕೋಟಿ ರೂ.ಗಳ turn-over ನಡೆಯತಕ್ಕಂಥ ವಿಶ್ವವಿದ್ಯಾಲಯ. ಅಲ್ಲಿ ಏನಾದರೂ irregularities ನಡೆದರೆ ಅಲ್ಲಿ ಯಾರನ್ನು ಹೊಣೆಗಾರರನ್ನಾಗಿ ಮಾಡುವುದು? ಇಲ್ಲಿ ಆದರೆ ನಾವು ಸಂಬಳ ಕಟ್ ಮಾಡುತ್ತೇವೆ, ಶಿಕ್ಷೆಯನ್ನು ಕೊಡಿಸುತ್ತೇವೆಂದು ಹೇಳಬಹುದು. ಆದರೆ ಇವರ ಮೇಲೆ ಯಾವ ರೀತಿಯ ಹಿಡಿತವೂ ಇಲ್ಲ. ಹಾಗಾಗಿ ಅದಕ್ಕೆ ಅವಕಾಶ ಇಲ್ಲದ ರೀತಿಯಲ್ಲಿ ಇದನ್ನು ಮಾಡಿರುವಂಥದ್ದು. ಸೆಕ್ಷನ್ 19ರಲ್ಲಿ ಆಡಳಿತ ಮಂಡಳಿಗೆ 6 ಜನ ಸದಸ್ಯರನ್ನು ನೇಮಕ ಮಾಡುವ ಅಧಿಕಾರ ರಾಜ್ಯಪಾಲರಿಗೆ ಇತ್ತು, 2 ಜನ ಸದಸ್ಯರನ್ನು ನೇಮಕ ಮಾಡುವ ಅಧಿಕಾರ ಸರ್ಕಾರಕ್ಕೆ ಇತ್ತು. ಈಗ ಅದನ್ನು inter-change ಮಾಡಿದೆ. 6 ಜನ ಸರ್ಕಾರ ನೇಮಕ ಮಾಡುತ್ತದೆ. 2 ಜನರನ್ನು ಮಾನ್ಯ ರಾಜ್ಯಪಾಲರು ಉಳಿದ ವಿಶ್ವವಿದ್ಯಾಲಯಗಳಿಗೆ ಇದ್ದಂತೆ ಮಾಡುತ್ತಾರೆ. ಸೆಕ್ಷನ್ 20ರಲ್ಲಿ ವಿಶ್ವವಿದ್ಯಾಲಯದ ಅಕಾಡೆಮಿಕ್ ಸೆನೆಟ್‌ನ ಆದೇಶ, ಅಧಿಸೂಚನೆ, ನಡವಳಿಕೆಗಳನ್ನು ರದ್ದುಗೊಳಿಸುವಂಥ ಅಧಿಕಾರ ಉಳಿದ ವಿಶ್ವವಿದ್ಯಾಲಯಗಳಲ್ಲಿ ಸರ್ಕಾರಕ್ಕಿದೆ. ಇಲ್ಲಿ ಕೂಡ ರದ್ದುಗೊಳಿಸುವಂಥ ಅಧಿಕಾರ ಸರ್ಕಾರಕ್ಕಿದೆ. ಹಾಗೆಯೇ ಸೆನೆಟ್ ರಚನೆಯಲ್ಲಿ ಪರಿಶಿಷ್ಟ ಜಾತಿ, ಪಂಗಡ ಮತ್ತು ಅಲ್ಪಸಂಖ್ಯಾತರ ಸಮೂಹಗಳಿಂದ ತಲಾ ಬಬ್ಬರು ಸದಸ್ಯರು ಇರತಕ್ಕಂಥದ್ದು ಎಂದಿದೆ. ಅದನ್ನು ಕಾಯ್ದಿರಿಸಿಕೊಂಡು ಅದನ್ನು ಸರ್ಕಾರ ನೇಮಿಸಬೇಕೆಂದು ಬದಲಾಯಿಸಿದೆ. ಇನ್ನು ರಾಜ್ಯ ಸರ್ಕಾರ ವಿಶ್ವವಿದ್ಯಾಲಯಗಳ ಲೆಕ್ಕಪತ್ರ ಆಡಿಟ್‌ಗೆ ಆದೇಶಿಸಬಹುದು ಎಂದಿದೆ. ಇದನ್ನು ಮುಂದುವರೆಸಿ ಆಡಿಟ್ ಸೂಚನೆಯಂತೆ ಸೂಕ್ತ ಪರಿಹಾರ ಕ್ರಮಗಳನ್ನು

ಸೂಚಿಸಬಹುದು. Pro-Chancellor ರವರು ಸರ್ಕಾರ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕ್ಕೂ ಸೂಚಿಸಬಹುದು. ಕೆಲವು ಭಾರಿ financial irregularities ನಡೆದಿದೆ ಎಂದು ಗೊತ್ತಾಗಿ ಆಡಿಟ್ ರಿಪೋರ್ಟ್ ಬರುತ್ತದೆ. ಆ ಆಡಿಟ್ ರಿಪೋರ್ಟ್ ಬಂದಾಗಲೂ ಕೂಡ ಸರ್ಕಾರಕ್ಕೆ ಏನೂ ಮಾಡುವ್ದಕ್ಕೆ ಅಧಿಕಾರವಿಲ್ಲ. ಹಾಗಾಗಿ irregularities ಇದೆ ಎಂದರೆ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳುವಂಥ ಅಧಿಕಾರ ಕೂಡ ಇಲ್ಲಿ ಕೊಟ್ಟಿದೆ. 2 ಜನ MLA ಮತ್ತು ಒಬ್ಬರು MLC ಆಡಳಿತ ಮಂಡಳಿಗೆ ನೇಮಕ ಮಾಡುವುದಕ್ಕೆ ಮಾನ್ಯ ಸಭಾಧ್ಯಕ್ಷರು ಮತ್ತು ಸಭಾಪತಿಗಳಿಗೆ ಅಧಿಕಾರವನ್ನು ಕೊಟ್ಟಿದೆ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಒಂದೇ ಮಾತಿನಲ್ಲಿ ಹೇಳುವುದಾದರೆ, ಒಳ್ಳೆಯ ಮುಹೂರ್ತ ಇಟ್ಟು ಈ ಬಿಲ್ ಅನ್ನು ತರಲಿಲ್ಲ. ಈ ಬಿಲ್‌ಗೆ ಅಪಶಕುನ ಆಗುತ್ತದೆ.

ಶ್ರೀ ಟಿ.ಬಿ.ಜಯಚಂದ್ರ(ಶಿರಾ): ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸಿ.ಟಿ ರವಿಯವರಿಗೆ ಆಗಲೇ ಸೂಕ್ಷ್ಮವಾಗಿ ಒಂದು ವಿಷಯವನ್ನು ಕೇಳಿದೆ ಏನೆಂದರೆ, ಇಷ್ಟೆಲ್ಲಾ ಅಮೆಂಡ್‌ಮೆಂಟ್ ತರುವುದಕ್ಕೆ ಪ್ರೇರಣೆ ಏನು? ಅದಕ್ಕೆ ಏನಾದರೂ study report ಇದೆಯೇ? ಅದಕ್ಕೆ ಯಾರ suggestion ಇದೆ ಎನ್ನುವುದನ್ನು ಕೇಳಿದೆ. ನೀವು ಆಗಲೇ ತಂದಂತಹ ಅಮೆಂಡ್‌ಮೆಂಟ್‌ನsame linesನಲ್ಲಿ ಈಗ ತಂದಿದ್ದೀರಿ. Term of office of the vice chancellor shall be 3 years, extendable by another term of similar period at the discretion of the Chancellor.ಅಂದರೆ ಒಬ್ಬರು Vice Chancellor ಆದರೆ, ಇನ್ನೊಂದು term ಅನ್ನು ಅವರನ್ನೇ extend ಮಾಡುವ ಅಧಿಕಾರವನ್ನು Chancellorಗೆ ಕೊಟ್ಟರೆ ಏನಾಗುತ್ತದೆ? Term of office of the Vice Chancellor shall be 3 years..,

ಶ್ರೀ ಸಿ.ಟಿ.ರವಿ(ಉನ್ನತ ಶಿಕ್ಷಣ ಸಚಿವರು): ಒಂದು ವರ್ಷಕ್ಕೆ ಅಧಿಕಾರ ಇತ್ತು. ಈಗ ಅಧಿಕಾರ ಇಲ್ಲ. 4 ವರ್ಷ ಒಂದೇ ಅವಧಿ. ಎರಡನೇ ಅವಧಿಗೆ ಇಲ್ಲ. ಉಳಿದ Universityಗೆ ಏನಿದೆ ಅದೇ ರೀತಿ. ಮುಂಚೆ ಏನೆಂದರೆ, ಮೂರು ವರ್ಷ ಆದ ಮೇಲೆ ಒಂದು ವರ್ಷ ಮುಂದುವರೆಸುವ ಅಧಿಕಾರ Chancellorಗೆ ಇತ್ತು. ಈಗ ಅದು ಇಲ್ಲ. ಅವರ period 4 ವರ್ಷಕ್ಕೆ ಬದಲಾಯಿಸಿದೆ. 4 ವರ್ಷವಾದ ಮೇಲೆ ಅವರ ಅವಧಿ ಮುಗಿಯಿತು.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ: ಇಲ್ಲಿ ಇದೆಯಲ್ಲಾ? ಅದನ್ನು ತೋರಿಸಿದ್ದಾರಲ್ಲಾ?

(ಗೊಂದಲ)

ಅಧ್ಯಕ್ಷರು: ಇಲ್ಲ ಅದು ತಿದ್ದುಪಡಿ.

(ಗೊಂದಲ)

ಶ್ರೀ ಸಿ.ಟಿ.ರವಿ: ಎಲ್ಲಿದೆ ಹೇಳಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ: Section 4 page no.6ರಲ್ಲಿ ಇದೆ. ಇದು ಹಳೆಯActನ ಪ್ರಾವಿಷನ್‌ನಲ್ಲಿರುವುದೇ? ಹೊಸದರಲ್ಲಿ ಎಲ್ಲಿದೆ?

ಶ್ರೀ ಸಿ.ಟಿ.ರವಿ: ಹೊಸದರಲ್ಲಿ 4ವರ್ಷtermಅಷ್ಟೆ.

ಶ್ರೀ ಸೈಯದ್ ಯಾಸೀನ್ (ರಾಯಚೂರು): ಸನ್ಮಾನ್ಯ ಸಭಾಧ್ಯಕ್ಷರೆ, regarding this University Bill, our Hon'ble Minister is very lucky to have all his Bills passed whole safe. But we have suffered a lot for the formation of Agriculture University Bill, 2 years we have suffered.ಏಕೆಂದರೆ ಇದೇsameವಿಷಯದ ಬಗ್ಗೆ,appointment of vice chancellor and appointment of MLA/MLC's and all. I am worried, our Minister ಬಹಳ exercise ಮಾಡಿ ಕೊಟ್ಟಿದ್ದಾರೆ. He has brought new modification also.ಇದು ಒಳ್ಳೆಯ ವಿಷಯ.But I am worried that it should suit to the Governor's office. Because His Excellency the Governor has got constitutional power and he is the Chancellor and Pro-Chancellor of all Universities. The violation,of power should not be there, the disturbance should not be there. Tomorrow our Bill should not return to our House. That is why he has to take all precautions. What our Mr.D.K.Shivakumar has said is correct and our

Hon'ble Minister has also exercised very well and he wants to bring more dimensions and if he gives move constitutional power to our Governor without any disturbance and, as well as move constitutional dimension and democratic dimension to the University it is good. But we have to be very careful and cautious.ಮಾನ್ಯ ಸದಸ್ಯರಿಂದ ಪರಿಷ್ಕರಿಸಲ್ಪಟ್ಟಿದೆ.

ಶ್ರೀ ಬಂಡೆಪ್ಪ ಖಾಶೆಂಪೂರ್ (ಬೀದರ್ ದಕ್ಷಿಣ): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ, ಮಾನ್ಯ ಮಂತ್ರಿಯವರು ಅಧಿಕಾರ ವಹಿಸಿಕೊಂಡು 6 ತಿಂಗಳು ಆಯಿತು. 6 ತಿಂಗಳಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಯಾವ್ಯಾವ appointments ತಪ್ಪಿ ಹೋಗಿದೆ, ಯಾವ್ಯಾವ V.C. appointment ತಪ್ಪಿ ಹೋಗಿದೆ, ಏನಾಗಿದೆ, ಮಂತ್ರಿಗಳು ಇಷ್ಟೊಂದು study ಮಾಡಿ ಇಷ್ಟು ದೊಡ್ಡ ದೊಡ್ಡ ಅಮೆಂಡ್‌ಮೆಂಟ್ ತರುವಂತಹ ಕಾಲ ಬಂದಿದೆ ಎಂದರೆ ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು: ಅದಕ್ಕಾಗಿ appreciate ಮಾಡಿ.

ಶ್ರೀ ಬಂಡೆಪ್ಪ ಖಾಶೆಂಪೂರ್: ನಾಲ್ಕು ಮುಕ್ಕಾಲು ವರ್ಷ ನೀವೇ ರಾಜ್ಯದ ಆಡಳಿತ ಮಾಡಿದ್ದು. ನಾವಲ್ಲ. ಅದರಲ್ಲಿ ಹಿಂದಿನ ಮಂತ್ರಿಗಳಿಗೆ ಯಾರಿಗೂ ಸಮಸ್ಯೆ ಆಗಿಲ್ಲ. ಮಾನ್ಯ ಸಿ.ಟಿ. ರವಿಯವರು ಬಹಳ ಶ್ರಮ ಪಡುತ್ತಿದ್ದಾರೆ. ಆದರೆ, 6 ತಿಂಗಳಿನಲ್ಲಿ ಏನು ಇಂಥಿಂಥ ದೊಡ್ಡ ಅಮೆಂಡ್‌ಮೆಂಟ್‌ಗಳು? ನೋಡಿ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಇದು ಇವತ್ತಿನದ್ದು ಅಲ್ಲ. ಹಿಂದಿನಿಂದ ಇದೆ. ಅದು ಒಂದೇ ಸರ್ಕಾರಿ ತಾಂತ್ರಿಕ ವಿಶ್ವವಿದ್ಯಾಲಯ ಇರುವುದು.

ಅಧ್ಯಕ್ಷರು: ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 2013ನೇ ಸಾಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ತಿದ್ದುಪಡಿ ವಿಧೇಯಕವನ್ನು ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆ ಮುಂದಿದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತೇನೆ.

ಖಂಡ 2ರಿಂದ 8

ಅಧ್ಯಕ್ಷರು : 2 ರಿಂದ 8 ರವರೆಗಿನ ಖಂಡಗಳು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ
2 ರಿಂದ 8 ರವರೆಗಿನ ಖಂಡಗಳು ವಿಧೇಯಕದ ಅಂಗವಾದವು.
ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(2 ರಿಂದ 8 ರವರೆಗಿನ ಖಂಡಗಳನ್ನು ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು: ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕು ಎನ್ನುವುದು ಸಭೆಯ ಮುಂದೆ ಇರುವ ವಿಷಯ.
ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

ಪ್ರಥಮ ಖಂಡ, ಹೆಸರು ಮತ್ತು ಅವರತಣಿಕೆ ವಿಧೇಯಕದ ಅಂಗವಾಗಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಅಧ್ಯಕ್ಷರು: ಮಾನ್ಯ ಸಚಿವರು ಅಂಗೀಕಾರ ಪ್ರಸ್ತಾವವನ್ನು ಮಂಡಿಸಬಹುದು.

ಅಂಗೀಕಾರ ಪ್ರಸ್ತಾವ

ಶ್ರೀ ಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2013ನೇ ಸಾಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ತಿದ್ದುಪಡಿ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"ಕರ್ನಾಟಕ ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2013ನೇ ಸಾಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ನೀಡಲಾಯಿತು)